ಮಂಗಳವಾರ, ಏಪ್ರಿಲ್ 3, 2018 | ಹುಬ್ಬಳ್ಳಿ - ಧಾರವಾಡ | ₹ 5.00 | ಸಂಪುಟ 30 | ಸಂಚಿಕೆ 92 | ಪುಟ 16 + 2 • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

### ಮನುವಿಕಾಸ ಸಂಸ್ಥೆಯ ನೇತೃತ್ವದಲ್ಲಿ ಕೆರೆ ಹೂಳೆತ್ತುವ ಕಾರ್ಯ; 3 ಕೆರೆಗಳ ಕಾಮಗಾರಿ ಪೂರ್ಣ

# ಬರದ ನಾಡಿನಲ್ಲಿ ಜಲಮೂಲ ಪುನಶ್ಚೇತನ

ಪ್ರಜಾವಾಣಿ ವಾರ್ತೆ

ಶಿರಸಿ: ನಿರಂತರ ಬರಗಾಲದಿಂದ ತತ್ತರಿಸಿರುವ ತಾಲ್ಲೂಕಿನ ಪೂರ್ವಭಾಗದ 10 ಕೆರೆಗಳ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿರುವ ಇಲ್ಲಿನ ಮನುವಿಕಾಸ ಸಂಸ್ಥೆಯು ಮೂರು ಕೆರೆಗಳ ಕೆಲಸ ಪೂರ್ಣಗೊಳಿಸಿದೆ. ಪುರಾತನ ಗುಡ್ನಾಪುರ ಕೆರೆ ಕಾಯಕ ಪ್ರಗತಿಯಲ್ಲಿದೆ.

ಕೋಕಾಕೋಲಾ ಇಂಡಿಯಾ ಫೌಂಡೇಷನ್ ನೆರವಿನಲ್ಲಿ ₹ 2 ಕೋಟಿ ಅಂದಾಜು ವೆಚ್ಚದಲ್ಲಿ ಆರಂಭಿಸಿರುವ ಕಾಮಗಾರಿಯ, ಶೇ 50ರಷ್ಟು ವೆಚ್ಚವನ್ನು ಸ್ಥಳೀಯ ರೈತರು ಭರಿಸುತ್ತಿದ್ದಾರೆ. ಸ್ವಂತ ಖರ್ಚಿನಲ್ಲಿ ಕೆರೆಯ ಹೂಳನ್ನು ತುಂಬಿಕೊಂಡು, ಹೊಲಗಳಿಗೆ ಹಾಕುತ್ತಿದ್ದಾರೆ.



ಶಿವರಾಮ ಹೆಬ್ಬಾರ

‘ಹಾಡಲಗಿ, ಹೊಸಕಟ್ಟಿ, ಮಲ್ಲಾನಕಟ್ಟಿ ಕೆರೆ ಹೂಳೆತ್ತುವ ಕಾಮಗಾರಿ ಪೂರ್ಣಗೊಂಡಿದೆ. 164 ಎಕರೆ ವಿಸ್ತಾರವಾಗಿರುವ ಗುಡ್ನಾಪುರ ಕೆರೆ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿದೆ. ಸರ್ಕಾರೇತರ ಸಂಸ್ಥೆಯಾಗಿರುವ ಮನುವಿಕಾಸ ಈ ಕೆರೆಯನ್ನು ಅಭಿವೃದ್ಧಿಪಡಿಸುತ್ತಿರುವುದು ವಿಶೇಷವಾಗಿದೆ. ಸಣ್ಣ ನೀರಾವರಿ ಇಲಾಖೆಯ ಸಹಕಾರದಲ್ಲಿ ಕೆರೆಯ ಒತ್ತುವರಿ ತೆರವುಗೊಂಡಿದೆ. ರೈತರು ಸ್ವಯಂ ಪ್ರೇರಣೆಯಿಂದ ಒತ್ತುವರಿ ತೆರವು ಮಾಡಿದ್ದಾರೆ. ಕೆರೆಯ ಸುತ್ತ ಬದು ನಿರ್ಮಾಣ ಮಾಡಿರುವುದರಿಂದ ಬರುವ ದಿನಗಳಲ್ಲಿ ಮತ್ತೆ ಅತಿಕ್ರಮಣ ಆಗುವ ಸಾಧ್ಯತೆಯಿಲ್ಲ’ ಎನ್ನುತ್ತಾರೆ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್.

**ಮುಖ್ಯಾಂಶಗಳು**

- 10 ಕೆರೆಗಳ ಅಭಿವೃದ್ಧಿಗೆ ಯೋಜನೆ
- ₹ 2 ಕೋಟಿ ಅಂದಾಜು ವೆಚ್ಚ

| ಕೆರೆ | ವಿಸ್ತೀರ್ಣ (ಎಕರೆಗಳಲ್ಲಿ) | ನೀರು ಶೇಖರಣೆ ಪ್ರಮಾಣ (ಮಿಲಿಯನ್ ಲೀಟರ್‌ಗಳಲ್ಲಿ) |
|---|---|---|
| ಹೊಸಕಟ್ಟಿ | 6.03 | 12.6 |
| ಮಲ್ಲಾಣಿಕಟ್ಟಿ | 5.17 | 17.55 |
| ಮಧುರವಳ್ಳಿ | 40 | 14 |
| ಗುಡ್ನಾಪುರ | 164 | 34 |
| ಕಪಗೇರಿ | 8.18 | 13.69 |
| ನರೂರ | 15.13 | 29.06 |
| ತಿಗಣಿ | 9.23 | 10.8 |
| ತಿಗಣಿ | 7.05 | 21.6 |
| ಕಂತ್ರಾಜಿ | 20.10 | 18.9 |
| ಹೊಸೂರ | 15.03 | 23.47 |



ಹೊಸೂರು ಕೆರೆ ಹೂಳೆತ್ತುವ ಕಾಮಗಾರಿ ನಡೆಯುತ್ತಿರುವುದು

‘ಸಂಸ್ಥೆಯ ಕಾರ್ಯವನ್ನು ಅನೇಕ ಸಂಸ್ಥೆಗಳ ಪ್ರಮುಖರು ವೀಕ್ಷಿಸಿದ್ದಾರೆ. ಎಡಲ್ಗೀವ್ ಫೌಂಡೇಷನ್‌ನ ವಿಜಯತಾ ಅವರು ಆರ್ಥಿಕ ನೆರವು ನೀಡುವ ಭರವಸೆ ನೀಡಿದ್ದಾರೆ. ಪ್ರವಾಸೋದ್ಯಮ ದೃಷ್ಟಿಯಿಂದ ಸಹ ಗುಡ್ನಾಪುರ ಕೆರೆ ಅಭಿವೃದ್ಧಿ ಮಹತ್ವದ್ದಾಗಿದೆ. ಮನು ವಿಕಾಸ ಸಂಸ್ಥೆಯು ಕೆರೆ ಭಾಗಶಃ ಹೂಳೆತ್ತುತ್ತದೆ. ಗುಡ್ನಾಪುರ ಬಂಗಾರೇಶ್ವರ ಸೇವಾ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಪರಶುರಾಮಪ್ಪ ಈಡೂರ ಅವರು ₹ 25 ಸಾವಿರ ದೇಣಿಗೆ ನೀಡಿದ್ದಾರೆ. ಅವರಂತೆಯೇ ಸಾರ್ವಜನಿಕರು, ಸಂಘ–ಸಂಸ್ಥೆಗಳ ನೆರವಾದರೆ, ಇನ್ನಷ್ಟು ಕೆಲಸ ಮಾಡಬಹುದು’ ಎಂದು ಅವರು ವಿನಂತಿಸಿದ್ದಾರೆ.

‘ಬನವಾಸಿ ಭಾಗದ ದೊಡ್ಡ ಕೆರೆಗಳ ಜೊತೆಗೆ, ಸಣ್ಣ ಕೆರೆಗಳನ್ನು ಅಭಿವೃದ್ಧಿಪಡಿಸಬೇಕು. ನಮ್ಮ ಭಾಗದ 100 ಕೆರೆಗಳ ವಿವರಗಳನ್ನು ಸಂಸ್ಥೆಗೆ ನೀಡಲಾಗಿದೆ. ಸರ್ಕಾರದಿಂದ ಅಗತ್ಯವಿರುವ ಅನುಮತಿ ಒದಗಿಸುವಲ್ಲಿ ಸಹಕರಿಸಲಾಗುವುದು’ ಎನ್ನುತ್ತಾರೆ ಜಿಲ್ಲಾ ಪಂಚಾಯ್ತಿ ಸದಸ್ಯೆ ರೂಪಾ ನಾಯ್ಕ.

## ರೈತರ ಬದುಕಿಗೆ ಹೊಸ ಶಕ್ತಿ

ಯಲ್ಲಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮನುವಿಕಾಸ ಕೆರೆ ಅಭಿವೃದ್ಧಿ ಕೈಗೆತ್ತಿಕೊಂಡಿರುವುದು ಸಂತಸ ತಂದಿದೆ. ಇನ್ನೊಂದೆಡೆ, ಸರ್ಕಾರ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಮಂಜೂರು ನೀಡಿದೆ. ಜನರ ಬಹುದಿನಗಳ ಆಶಯ ಈಡೇರಿದಂತಾಗಿದೆ. ಜಲಮೂಲ ಅಭಿವೃದ್ಧಿಯಿಂದ ರೈತರ ಬದುಕಿಗೆ ಹೊಸ ಶಕ್ತಿ ದೊರೆತಂತಾಗುತ್ತದೆ ಎಂದು ಶಾಸಕ ಶಿವರಾಮ ಹೆಬ್ಬಾರ ಪ್ರತಿಕ್ರಿಯಿಸಿದ್ದಾರೆ.